ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
ಜಿ.ಆರ್.ಆರ್.ನಂ. 382
1 JUL 2013
ಬೆಂಗಳೂರು-9

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಎಂ.ಎಸ್ಸಿ., ನರ್ಸಿಂಗ್ ಮತ್ತು ಎಂ.ಪಿ.ಟಿ. (Master of Physiotherapy) ಸ್ನಾತಕೋತ್ತರ ವ್ಯಾಸಂಗಕ್ಕೆ ಈ ಹಿಂದೆ ನಿಗದಿಗೊಳಿಸಲಾಗಿರುವ ಬೋಧನಾ ಶುಲ್ಕವನ್ನು ಮುಂದಿನ ಅವಧಿಗೆ ಮುಂದುವರಿಸುವ ಬಗ್ಗೆ.

---

**ಓದಲಾಗಿದೆ:**

1. ಅಧಿಸೂಚನೆ ಸಂಖ್ಯೆ:ಆಕುಕ 44 ಎಂಪಿಎಸ್ 2003 (ಭಾಗ-1), ದಿನಾಂಕ 24.12.2003.
2. ಸರ್ಕಾರದ ಆದೇಶ ಸಂಖ್ಯೆ:ಆಕುಕ 88 ಎಂಪಿಎಸ್ 2004, ದಿನಾಂಕ 12.05.2004.
3. ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರ ಪತ್ರ ಸಂಖ್ಯೆ:ವೈಶಿನಿ/ಎಸ್ಆರ್‌ಸಿ (1)/ಹೆಚ್ಇ/02/2013-14, ದಿನಾಂಕ 30.04.2013.

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಅಧಿಸೂಚನೆಯಲ್ಲಿ 1984 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕ್ಯಾಪಿಟೇಷನ್ ಶುಲ್ಕ ನಿಷೇಧ) ಅಧಿನಿಯಮದ 5ನೇ ಪ್ರಕರಣದಡಿ ನಿಹಿತವಾದ ಅಧಿಕಾರವನ್ನು ಚಲಾಯಿಸಿ ಎಂ.ಎಸ್ಸಿ., ನರ್ಸಿಂಗ್, ಎಂ-ಫಾರ್ಮಾ ಮತ್ತು ಎಂಪಿಟಿ ಕೋರ್ಸುಗಳ ಶುಲ್ಕವನ್ನು 2003-04 ನೇ ಸಾಲಿಗೆ ಸೀಮಿತಗೊಳಿಸಿ ಈ ಕೆಳಕಂಡಂತೆ ನಿಗದಿಗೊಳಿಸಲಾಗಿದೆ.

| | | |
|---|---|---|
| ಸರ್ಕಾರಿ ಔಷಧ ವಿಜ್ಞಾನ ಕಾಲೇಜು : ನರ್ಸಿಂಗ್ ಕಾಲೇಜು | | |
| 1. | ಬೋಧನಾ ಶುಲ್ಕ | ರೂ.10,000/- |
| 2. | ಇತರೆ ಶುಲ್ಕ | ರೂ.3,900/- |
| ಖಾಸಗಿ ನರ್ಸಿಂಗ್, ಫಾರ್ಮಸಿ ಮತ್ತು ಫಿಜಿಯೋಥೆರಪಿ ಕಾಲೇಜುಗಳು | | |
| 1. | ಬೋಧನಾ ಶುಲ್ಕ | ರೂ.10,000/- |
| 2. | ಇತರೆ ಶುಲ್ಕ | ರೂ.30,000/- |
| ಖಾಸಗಿ ನರ್ಸಿಂಗ್, ಫಾರ್ಮಸಿ ಮತ್ತು ಫಿಜಿಯೋಥೆರಪಿ ಕಾಲೇಜುಗಳಲ್ಲಿ ಆಡಳಿತ ಮಂಡಳಿ ಸೀಟುಗಳು | | |
| 1. | ಬೋಧನಾ ಮತ್ತು ಇತರೆ ಶುಲ್ಕಗಳು (ವಾರ್ಷಿಕ) | ರೂ.80,000/- |
| | | |

ಮೇಲ್ಕಂಡ ಶುಲ್ಕ ವಿನ್ಯಾಸವು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಶುಲ್ಕವನ್ನು ಹೊರತುಪಡಿಸಿರುತ್ತದೆ. ಅದನ್ನು ಪ್ರತ್ಯೇಕವಾಗಿ ಸಂದಾಯ ಮಾಡತಕ್ಕದ್ದೆಂದು ಸದರಿ ಅಧಿಸೂಚನೆಯಲ್ಲಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2004-05 ನೇ ಸಾಲಿನಲ್ಲಿ ಎಂ.ಎಸ್ಸಿ., ನರ್ಸಿಂಗ್ ಮತ್ತು ಎಂಪಿಟಿ ಸ್ನಾತಕೋತ್ತರ ವ್ಯಾಸಂಗಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸೀಟ್ ಮ್ಯಾಟ್ರಿಕ್ಸ್‌ನ ಅಧಿಸೂಚನೆಯನ್ನು ಹೊರಡಿಸಿದ್ದು, 2004-05 ನೇ ಸಾಲಿಗೆ ಅನ್ವಯವಾಗುವಂತೆ ಸದರಿ ಕೋರ್ಸುಗಳಿಗೆ ತಲಾ ರೂ.80,000/- ಗಳ ಬೋಧನಾ ಶುಲ್ಕವನ್ನು ನಿಗದಿಗೊಳಿಸಿ ಆದೇಶಿಸಿದೆ.

Scanned with CamScanner

ಮುಂದುವರಿದು, ಅಭ್ಯರ್ಥಿಗಳಿಂದ ಪಾವತಿಸಬೇಕಾದ ಇನ್ನಿತರ ಶುಲ್ಕಗಳು ಅಂದಿನ ದಿನದಂದು ಪ್ರಚಲಿತದಲ್ಲಿದ್ದ ಸರ್ಕಾರಿ ಆದೇಶಗಳಲ್ಲಿನಂತೆ ಇರತಕ್ಕದ್ದೆಂದು ಕೂಡ ಈ ಆದೇಶದಲ್ಲಿ ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಬೆಂಗಳೂರು ಇವರು ಮೇಲ್ಕಂಡ ಕೋರ್ಸುಗಳಿಗೆ ಮೇಲ್ಕಂಡಂತೆ 2003-04 ಮತ್ತು 2004-05 ನೇ ಸಾಲಿಗೆ ಶುಲ್ಕವನ್ನು ನಿಗದಿಗೊಳಿಸಿದ್ದು, 2004-05 ರ ನಂತರದ ವರ್ಷಗಳಿಗೆ ಅನ್ವಯವಾಗುವ ಬೋಧನಾ ಶುಲ್ಕವನ್ನು ಮುಂದುವರಿಸಿ ಸರ್ಕಾರ ಆದೇಶ ಹೊರಡಿಸಿರುವುದಿಲ್ಲವಾದ್ದರಿಂದ, ಈ ಬೋಧನಾ ಶುಲ್ಕವನ್ನು ಸರ್ಕಾರವು ಪರಿಷ್ಕರಿಸುವವರೆಗೂ ಎಂ.ಎಸ್ಸಿ., ನರ್ಸಿಂಗ್ ಮತ್ತು ಎಂಪಿಟಿ ಸ್ನಾತಕೋತ್ತರ ವ್ಯಾಸಂಗಕ್ಕೆ ಮೇಲೆ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿನ ಆದೇಶಗಳಲ್ಲಿ ನಿಗದಿಗೊಳಿಸಲಾಗಿರುವ ಬೋಧನಾ ಶುಲ್ಕವನ್ನೇ 2004-05 ನೇ ಸಾಲಿನಿಂದಲೇ ಮುಂದುವರಿಸಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಅಧಿಸೂಚನೆ ಸಂಖ್ಯೆ:ಆಕುಕ 44 ಎಂಪಿಎಸ್ 2003 (ಭಾಗ-1), ದಿನಾಂಕ 24.12.2003 ಮತ್ತು ಸರ್ಕಾರದ ಆದೇಶ ಸಂಖ್ಯೆ:ಆಕುಕ 88 ಎಂಪಿಎಸ್ 2004, ದಿನಾಂಕ 12.05.2004 ರಲ್ಲಿ ಎಂ.ಎಸ್ಸಿ., ನರ್ಸಿಂಗ್ ಮತ್ತು ಎಂಪಿಟಿ (Master of Physiotherapy) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಗದಿಗೊಳಿಸಲಾಗಿರುವ ಶುಲ್ಕವನ್ನೇ 2004-05 ನೇ ಸಾಲಿನಿಂದ ಅನ್ವಯವಾಗುವಂತೆ ಮುಂದುವರಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 96 ಎಂಪಿಎಸ್ 2013 , ಬೆಂಗಳೂರು, ದಿನಾಂಕ 27.06.2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಧಿಸೂಚನೆ ಸಂಖ್ಯೆ:ಆಕುಕ 44 ಎಂಪಿಎಸ್ 2003 (ಭಾಗ-1), ದಿನಾಂಕ 24.12.2003 ಮತ್ತು ಸರ್ಕಾರದ ಆದೇಶ ಸಂಖ್ಯೆ:ಆಕುಕ 88 ಎಂಪಿಎಸ್ 2004, ದಿನಾಂಕ 12.05.2004 ರಲ್ಲಿ ಎಂ.ಎಸ್ಸಿ., ನರ್ಸಿಂಗ್ ಮತ್ತು ಎಂಪಿಟಿ (Master of Physiotherapy) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಗದಿಗೊಳಿಸಲಾಗಿರುವ ಬೋಧನಾ ಶುಲ್ಕವನ್ನೇ 2004-05 ನೇ ಸಾಲಿನಿಂದ ಅನ್ವಯವಾಗುವಂತೆ ಹಾಗೂ ಮುಂದಿನ ಶುಲ್ಕ ಪರಿಷ್ಕರಣೆಯವರೆಗೆ ಮುಂದುವರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
27/6/13
(ವಿ.ಸಾಯಿಬಾಬಾ)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)
27/06/13

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

Scanned with CamScanner

ಪ್ರತಿ:

1. ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಜಯನಗರ, 4 ನೇ ಟಿ ಬ್ಲಾಕ್, ಬೆಂಗಳೂರು-41
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009.
3. ರಾಜ್ಯದ ಎಲ್ಲಾ ಸರ್ಕಾರಿ / ಖಾಸಗಿ ನರ್ಸಿಂಗ್ ಮತ್ತು ಫಿಜಿಯೋಥೆರಪಿ ಕಾಲೇಜುಗಳ ಪ್ರಾಂಶುಪಾಲರುಗಳು - (ವೈದ್ಯಕೀಯ ಶಿಕ್ಷಣ ನಿರ್ದೇಶಕರ ಮುಖಾಂತರ.)
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ.

Scanned with CamScanner